457 ಶ್ರೀಮತಿ ಅನಿತಾಕುಮಾರಸ್ವಾಮಿ (ಮಧುಗಿರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಶ್ವತ ಬರಪೀಡಿತ ಪ್ರದೇಶಗಳೆಂದು ಸರ್ಕಾರ ಘೋಷಿಸಿರುವ ಜಿಲ್ಲೆಗಳು ಯಾವುವು (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಮಧುಗಿರಿ ತಾಲ್ಲೂಕು ಶಾಶ್ವತ ಬರಪೀಡಿತ ಪ್ರದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಶಾಶ್ವತ ಬರಪೀಡಿತ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ, ಈ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರ ನಿಗದಿ ಪಡಿಸಿರುವ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಶಾಶ್ವತ ಬರಪೀಡಿತವೆಂದು ಯಾವುದೆ ಜಿಲ್ಲೆಯನ್ನು ಘೋಷಿಸಿರುವುದಿಲ್ಲ.

ಆ) 2009–10ನೇ ಸಾಲಿನಲ್ಲಿ ಬರಪೀಡಿತ ತಾಲ್ಲೂಕೆಂದು ಘೋಷಿಸಲಾಗಿದೆ.

ಇ) ಬರ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು ಮೇವು ಸರಬರಾಜು ಮತ್ತು ಜಾನುವಾರು ಸಂರಕ್ಷಣೆಗಾಗಿ ಪ್ರತಿ ತಾಲ್ಲೂಕಿಗೆ ರೂ. 1–00 ಕೋಟಿಯಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಅನುದಾನ ನಿಗದಿ ಮಾಡಿರುವುದಿಲ್ಲ.

452 ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಿಂದ ಕಡೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ನೀರಾವರಿ ಯೋಜನೆ ಕಲ್ಪಿಸಲು ಪ್ರಸಕ್ತ ಸಾಲಿನಲ್ಲಿ ಸರ್ಕಾರ ತೆಗೆದಕೊಂಡಿರುವ ಕ್ರಮಗಳೇನು?

ಆ) ಹೆಬ್ಬೆ ಹಳ್ಳದಿಂದ ಕಡೂರು ತಾಲ್ಲೂಕಿನ ವಿವಿಧ ಕರೆಗಳಿಗೆ ನೀರು ಒದಗಿಸುವ ಯೋಜನೆಯು ಯಾವ ಹಂತದಲ್ಲಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಕಡೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯು ಕೈಗೊಂಡಿರುವ ವಿವಿಧ ನೀರಾವರಿ ಯೋಜನೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕಡೂರು ತಾಲ್ಲೂಕಿನ ವಿವಿಧ ಕೆರೆಗಳಿಗೆ ನೀರು ಒದಗಿಸಲು ಸಣ್ಣ ನೀರಾವರಿ ಇಲಾಖೆಯಿಂದ ಯಾವುದೇ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4528ಕ್ಕೆ ಅನುಬಂಧ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಹೊಸದಾಗಿ ಸೃಜಿಸಿಯೋಗುವ ನೀರಾವರಿ ಕ್ಷೇತ್ರ(ಹೆ.ಗಳಲ್ಲಿ)	ಪ್ರಸ್ತುತ ಹಂತ
1	2	3	4	5	6
1	4702-133 ವಿಶೇಷ ಅಭಿವೃದ್ಧಿ ಯೋಜನೆ	ಬಳ್ಳೇಕೆರೆ ಕೆಳ ಮಟ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ	5.00	3.20	ಕಾಮಗಾರಿ ಮುಗಿದಿದೆ
2	4702-422 ವಿಶೇಷ ಘಟಕ ಯೋಜನೆ(ವಿಶ್ವ ಬ್ಯಾಂಕ್ ನೀರಾವರಿ)	ಬಾಗೇಪಹಳ್ಳಿ ಗ್ರಾಮ ಪಂಚಾಯಿತಿ ಅಗ್ರಹಾರ ತಾಂಡ್ಯ ಹಿಡುವಳಿದಾರರಿಗೆ ನೀರಾವರಿ ಸೌಲಭ್ಯ ಒದಗಿಸುವುದು	5.00	3.00	ಬೋರ್‌ವೆಲ್ ತೆಗೆದಿದೆ. ಉಳಿಕೆ ಕೆಲಸ ಪ್ರಗತಿಯಲ್ಲಿದೆ.
3	ಪಬಾರ್ಡ್-15	ದೇವಪೂರು ಶಾಲಾ ಪಿಕಪ್‌ಗೆ ಕಾಲುವೆ ನಿರ್ಮಾಣ	40.00	80.00	ಪಬಾರ್ಡ್‌ನಿಂದ ಸಾಲಸೌಲಭ್ಯ ದೊರೆತಿದ್ದು, ಕಾಮಗಾರಿಯ ಅನುಷ್ಠಾನದ ಪ್ರಕ್ರಿಯೆ ಜಾರಿಯಲ್ಲಿದೆ.
4	ಎ.ಐ.ಬಿ.ಪಿ.	ಹೊಸ ಮುದಗದ ಕೆರೆಯ ಕಾಲುವೆಗಳ ನಿರ್ಮಾಣ	100.00	125.00	ಕೇಂದ್ರ ಸರ್ಕಾರ ಪುರಸ್ಕೃತ ಎ.ಐ.ಬಿ.ಪಿ. ಯೋಜನೆಯಲ್ಲಿ ಪ್ರಥಮ ಬಾರಿಗೆ ಸಣ್ಣ ನೀರಾವರಿ ಇಲಾಖೆಗೆ ವಿಸ್ತರಿಸಲಾಗಿದೆ. ಕಡೂರು ತಾ: ಈ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಲು ಪ್ರಸ್ತಾಪಿಸಿದ್ದು, ಮಂಜೂರಾತಿ ದೊರೆತ ಕೂಡಲೇ ನಿಯಮಾನುಸಾರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು
5	ಎ.ಐ.ಬಿ.ಪಿ.	ಯಗಟಿಮರ ಬಳಿ ಬಸವಪ ತೀರ್ಥ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ	25.00	50.00	
6	ಎ.ಐ.ಬಿ.ಪಿ.	ಬುಕ್ಕಸಾಗರ ಕೆರೆ ಕಾಲುವೆಗಳ ನಿರ್ಮಾಣ	25.00	50.00	
7	ಎ.ಐ.ಬಿ.ಪಿ.	ಕಡೂರು ಕಸಬಾ ಹೋಬಳಿ ಹೊಸಹಳ್ಳಿ ಹತ್ತಿರ ಇರುವ ಪಿಕಪ್‌ಗೆ ಕಾಲುವೆ ನಿರ್ಮಾಣ	25.00	50.00	
8	ಎ.ಐ.ಬಿ.ಪಿ.	ಬೆಳ್ಳ ಒಡ್ಡು ಕಾಲುವೆಗೆ ಪಿಕಪ್ ನಿರ್ಮಾಣ	25.00	50.00	
9	ಎ.ಐ.ಬಿ.ಪಿ.	ಬಾಣೂರುಹಳ್ಳಕ್ಕೆ ಪಿಕಪ್ ನಿರ್ಮಾಣ	40.00	70.00	
10	ಎ.ಐ.ಬಿ.ಪಿ.	ಪಿಲ್ಲೇಪಹಳ್ಳಿ ಹತ್ತಿರ ಪೇದಾಪತಿ ಹಳ್ಳಕ್ಕೆ ಪಿಕಪ್ ನಿರ್ಮಾಣ.	40.00	75.00	
11	ಎ.ಐ.ಬಿ.ಪಿ.	ಅಗ್ರಹಾರ ತಾಂಡ್ಯ ಬಾಗೇಪಹಳ್ಳಿ ಅಚ್ಚುಕಟ್ಟುದಾರರಿಗೆ ನೀರಾವರಿ ಸೌಲಭ್ಯ ಒದಗಿಸುವುದು	30.00	50.00	
		ಒಟ್ಟು	360.00	606.20	